

ನಾಲ್ಕು ಆಸನಗಳ ಕಾರ್ಟ್‌ನಲ್ಲಿ ಸಂಚರಿಸುತ್ತ ದ್ವೀಪದ ಸೌಂದರ್ಯವನ್ನು ಆಸ್ವಾದಿಸಿದೆವು.

ನಿಗದಿಪಡಿಸಿದ ವಿಸ್ಟಾ ಪಾಯಿಂಟ್‌ಗಳಲ್ಲಿ ಕಾರ್ಟ್ ನಿಲ್ಲಿಸಿ ಎತ್ತರದ ಬೆಟ್ಟಗಳಿಂದ ಕಂಡ ವಿಶಾಲ ಸಾಗರದ ದೃಶ್ಯಗಳಂತೂ ಸುಮನೋಹರ, ಅಷ್ಟೇ ಭಯಂಕರ. ಕಾರ್ಟ್ ಟ್ರಿಪ್‌ನ ಮಾರ್ಗಸೂಚಿ, ವಿಸ್ಟಾ ಪಾಯಿಂಟ್‌ಗಳ ಮ್ಯಾಪ್ ಇರುವ ಕರಪತ್ರ ನಮಗೆ ನೀಡಿದ್ದರು. ಇದು ಮೂರು ಮೈಲಿಗಳ ಲೂಪ್ ರೀತಿಯ ಪ್ರಯಾಣ. ಉದ್ದಕ್ಕೂ ಹೆಲಿಕಾಪ್ಟರ್ ಸ್ಟೇಷನ್, ಗಾಲ್ಫ್ ಕ್ರೀಡಾಂಗಣ, ಬೊಟಾನಿಕಲ್ ಗಾರ್ಡನ್, ಮ್ಯೂಸಿಯಂ ಆಫ್ ಆರ್ಟ್ಸ್, ಜಿಪ್ ಲೈನ್ ಎಕೊ ಟೂರ್ ಹಾಗೂ ಅಲ್ಲಿಯ ನಿವಾಸಿಗಳ ಮನೆಗಳನ್ನು ನೋಡುತ್ತಾ ಉಸಿರು ಬಿಗಿಹಿಡಿಸುವ ವಿಹಂಗಮ ರಮಣೀಯ ದೃಶ್ಯಗಳನ್ನು ಕಣ್ತುಂಬಿಕೊಂಡೆವು.

ಕ್ಯಾಟಲಿನಾ ದ್ವೀಪದಲ್ಲಿ ಸುಮಾರು 600 ಪ್ರಭೇದಗಳ ಸಸ್ಯಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ 400 ಸ್ಥಳೀಯವಾದವು. ದ್ವೀಪಕ್ಕೆ ಸ್ಥಳೀಯವಾಗಿ ವಿಕಾಸಗೊಂಡ ಕಾಡೆಮ್ಮೆ, ಅಳಿಲು, ಇಲಿ, ಜಿಂಕೆಗಳಿವೆ. 60 ವಿವಿಧ ಪ್ರಭೇದಗಳಿಗೆ ಸೇರಿದ ಸಸ್ಯ ಪ್ರಾಣಿಗಳು ಈ ದ್ವೀಪಕ್ಕಷ್ಟೇ ಸೀಮಿತ. ಒಟ್ಟಾಗಿ ಇಲ್ಲಿಯ ಸಸ್ಯ ಪ್ರಾಣಿ ಸಂರಕ್ಷಣೆಗಾಗಿ ಇಲ್ಲಿ ಒಂದು ಸಂಸ್ಥೆಯೂ ಇದೆ. ಹೀಗೆ ಒಂದೊಂದು ವಿಷಯಗಳನ್ನು ತಿಳಿದುಕೊಳ್ಳುತ್ತಾ, ನೋಡುತ್ತಾ ಕಾಲ ದೂಡುತ್ತಾ, ಕಾರ್ಟನ್ನು ಹಿಂತಿರುಗಿಸುವ ಸಮಯ ಬಂದೇ ಬಿಟ್ಟಿತು.



ಸಂಸಾರ ಸಮೇತರಾಗಿ ಎರಡು ಮೂರು ದಿನಗಳ ಇಲ್ಲಿಯ ವಾಸಕ್ಕಾಗಿ ಬಂದವರು ಕೆಲವರಾದರೆ, ನಮ್ಮಂತೆ ಬಂದ ದಿನವೇ ಹಿಂತಿರುಗುವವರು ಕೆಲವರು. ಮಕ್ಕಳು, ಮದುಮಕ್ಕಳು, ವೃದ್ಧರು ತಂಡತಂಡವಾಗಿ ವಿಹರಿಸುತ್ತಿದ್ದರು. ತಮ್ಮ ಜೊತೆಗೆ ಸಾಕುನಾಯಿಗಳನ್ನು ಮಕ್ಕಳಂತೆ ಎತ್ತಿಕೊಂಡು ಸಾಗುತ್ತಿದ್ದರು. ಕೆಲವರು ಬೆಟ್ಟಗಳಲ್ಲಿ ಹೈಕಿಂಗ್ ನಡೆಸುತ್ತಿದ್ದರೆ, ಇನ್ನು ಕೆಲವರು ಸಮುದ್ರದ ನೀರಲ್ಲಿ ಕಯಾಕಿಂಗ್ ನಡೆಸುತ್ತಿದ್ದರು. ಮತ್ತೆ ಕೆಲವರಿಂದ ಆಕಾಶದಲ್ಲಿ ಹೆಲಿಕ್ಯಾಪ್ಟರ್ ಗ್ಲೈಡಿಂಗ್ ವಿಹಾರ.

ಪಟ್ಟಣದ ಮಾರ್ಗಗಳ ಉದ್ದಕ್ಕೂ ರೆಸ್ಟೋರೆಂಟ್‌ಗಳದ್ದೇ ಕಾರುಬಾರು. ಒಳಗೂ ಹೊರಗೂ ಜನವೋ ಜನ. ಎಲ್ಲೆಲ್ಲೂ ಉಲ್ಲಾಸ, ವಿಲಾಸ. ನಾವಂತೂ ಸಂಜೆ (ಎಂದರೆ 7 ಗಂಟೆಯಿಂದ 10 ಗಂಟೆವರೆಗೆ. ಬೇಸಿಗೆಯಲ್ಲಿ ಇಲ್ಲಿ ಸೂರ್ಯಾಸ್ತಮಾನ 8.30ಕ್ಕೆ) ಅವಲಾನ್ ಪಟ್ಟಣದ ಬೀದಿಗಳಲ್ಲಿ ಮೂರು ಗಂಟೆಗಳ ಕಡಲ ತೀರದ ನಡಿಗೆ ನಡೆಸಿ **Descanso** ಬೀಚ್‌ನಲ್ಲಿ ಸ್ವಲ್ಪ ಹೊತ್ತು ಕಳೆದು ದ್ವೀಪ ಪಟ್ಟಣದ ಅನುಭವ ಪಡೆದೆವು. ನಾವು ಕಾದಿರಿಸಿದ ಫೆರ್ರಿ ಸಮಯ ರಾತ್ರಿ 10.30ಕ್ಕೆ. ಲಾಸ್ ಏಂಜಲೀಸ್‌ಗೆ ವಾಪಸಾಗಲು ರಾತ್ರಿಯ ಈ ಕೊನೇ ಫೆರಿಯನ್ನೇರಿದೆವು.

ಕತ್ತಲಲ್ಲಿ ನಕ್ಷತ್ರದಂತೆ ಮಿನುಗುತ್ತಿದ್ದ ದ್ವೀಪದ ದೇದೀಪ್ಯಮಾನ ಚೆಲುವನ್ನು ಕಣ್ಣಲ್ಲೇ ಕಡೆದಿಟ್ಟುಕೊಂಡೆವು.

ಪ್ರತಿಕ್ರಿಯಿಸಿ: **feedback@sudha.co.in**